ತರಿಸಿಕೊಳ್ಳಿ. ನಾಗಮಂಗಲ ತಾಲ್ಲೂಕಿನ ಸಿ.ಇ.ಓ. ಮತ್ತು ಡಿ. ಸಿ. ಇಬ್ಬರ ಜೊತೆಯಲ್ಲೂ ಕೂಡ ಮಾತನಾಡಿ.

(ಗೊಂದಲ)

ಅಧ್ಯಕ್ಷರು: ಮುಖ್ಯ ಮಂತ್ರಿಯವರೆ, ಕುಡಿಯುವ ನೀರಿಗೆ task force ಎಂದು ಏನು ಮಾಡಿದ್ದೇವೆ, ಅವರು ಅದು ಇದು ಮಾಡಿ ಎಂದು ಹೇಳುತ್ತಿರುತ್ತಾರೆ. ಅವರ ಬದಲಾಗಿ ಸರಳೀಕರಣವಾಗಿ ಮಾಡುವಂತೆ ಜಿಲ್ಲಾ ಧಿಕಾರಿಗಳಿಗೋ ಅಥವಾ ಸಿ.ಇ.ಓ. ಅವರಿಗೆ ಕೊಟ್ಟರೆ ತಕ್ಷಣವೇ ಮಾಡುತ್ತಾರೆ.

ಶ್ರೀ ಸಿದ್ಧರಾಮಯ್ಯ: ಸಂದಾಯ ಮಾಡುವುದು ಯಾವುದಾದರೂ ಇದ್ದರೆ ಮಾಡೋಣ.

5. ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ

ವಿಷಯ: ಹಾಸನ–ದುದ್ದ ತಿಪಟೂರು ರಸ್ತೆ ಬಗ್ಗೆ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಹಾಸನ–ದುದ್ಧ–ತಿಪಟೂರು ರಸ್ತೆ ಮಾಡುವುದಕ್ಕೆ ಪ್ರಾರಂಭ ಮಾಡಿ ಏಳು ವರ್ಷವಾಯಿತು. ಇಲ್ಲಿಯವರೆಗೂ ಮಾಡಿರುವುದಿಲ್ಲ. ಜನ ಸಾಯುತ್ತಿದ್ದಾರೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಅಲ್ಲಿ ಯಾವ MLA ಗಳು ಹೋಗಲಾರದ ಪರಿಸ್ಥಿತಿ ಬಂದಿದೆ.

(ಗೊಂದಲ)

ಅಧ್ಯಕ್ಷರು: ಈಗ ಬೇಡಿಕೆಯ ಮೇಲೆ ಚರ್ಚೆ ಆಗಬೇಕೋ ಬೇಡವೋ?

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ ನಾನು ಮಾತನಾಡುವುದು ಬೇಡವೆಂದರೆ walk out ಮಾಡಿ ಹೋಗುತ್ತೇನೆ.

ಅಧ್ಯಕ್ಷರು: ಅದು ಬೇರೆ ಮಾತು. ಇದ್ದಂಥ ಅವಧಿಯಲ್ಲಿ ಎಲ್ಲಾ ಬೇಡಿಕೆಗಳ ಮೇಲೆ ಚರ್ಚೆ ಆಗಬೇಕಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್. ಡಿ. ರೇವಣ್ಣನವರು ಸಭಾತ್ಯಾಗ ಮಾಡಲು ಹೊರಟರು)

ಶ್ರೀ ಸಿದ್ಧರಾಮಯ್ಯ: ಮಾನ್ಯ ರೇವಣ್ಣನವರೆ, ನಿಮ್ಮ ಸಮಸ್ಯೆ ಏನು? ಯಾಕೆ ಇಷ್ಟೊಂದು ಕೋಪ? ತಾವು ಒಬ್ಬರೇ ಏಕೆ ಸಭಾತ್ಯಾಗ ಮಾಡುತ್ತೀರಿ? ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ರೇವಣ್ಣನವರೇ Dictate ಮಾಡುವುದಕ್ಕೆ ಆಗುವುದಿಲ್ಲ. ನಿಮ್ಮ ವಿಷಯವನ್ನು ಕೊನೆಯಲ್ಲಿ ಇಟ್ಟುಕೊಂಡಿದ್ದೇವೆ. ನಿನ್ನೆ ಅವರದ್ದು ಇತ್ತು. ಅದನ್ನು ಇವತ್ತು ಇಟ್ಟುಕೊಂಡಿದ್ದೇವೆ. ಅದಕ್ಕೆ ಅವರಿಗೆ ಅವಕಾಸ ಕೊಡುತ್ತಿದೇನೆ.

(ಗೊಂದಲ)

ಅಧ್ಯಕ್ಷರು: ನಿಮಗೆ ಅವಕಾಶ ಕೊಡುತ್ತೇನೆ. ಆದರೆ vote ಗೆ ಹಾಕಿ ಇವತ್ತೇ ಮುಗಿಸುತ್ತೇನೆ. ನಿಮ್ಮ ವಿಷಯವನ್ನೇ ತೆಗೆದುಕೊಳ್ಳೋಣ. ಏನು ಮಾತನಾಡುತ್ತೀರೋ ಮಾತನಾಡಿ. ಈ ತರಹ dictate ಮಾಡಿದರೆ, I can't tolerate.

ಶ್ರೀ ಡಿ. ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ನೀವು tolerate ಮಾಡುತ್ತಿದ್ದೀರಲ್ಲ. ಅವರು dictate ಮಾಡುತ್ತಿರುವುದನ್ನು ತಾವು ಒಪ್ಪಿಕೊಳ್ಳುತ್ತಿದ್ದೀರಲ್ಲ.

ಅಧ್ಯಕ್ಷರು: ನಮಗೂ ವಿಧಿ–ವಿಧನಗಳಿವೆ. ಎಲ್ಲಾ ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕು.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ: ಎಲ್ಲಾ ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದಂತೆ ಇಲ್ಲಿ ನಾವು ಚರ್ಚೆ ಮಾಡಬೇಕಾಗಿದೆ.

ಅಧ್ಯಕ್ಷರು: ಎಲ್ಲವೂ ಸಾರ್ವಜನಿಕ ವಿಷಯಗಳೇ.

ಶ್ರೀ ಪ್ರಮೋದ್ ಮದ್ವರಾಜ್: ಇಲ್ಲಿ ಸ್ವಂತದ್ದನ್ನು ಯಾರು ಮಾತ ನಾಡುತ್ತಾರೆ?

ಅಧ್ಯಕ್ಷರು: ಆಯಿತು, ಚರ್ಚೆ ಮಾಡ್ರಿ.

ಶ್ರೀ ಕೆ. ಷಡಕ್ಷರಿ: ಮಾನ್ಯ ಅಧ್ಯಕ್ಷರೆ, ಸೋಮವಾರ ಚರ್ಚೆಗೆ ಅವಕಾಶ ಕೊಡಿ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಆಯಿತು, ಸೋಮ ವಾರ ಬೆಳಿಗ್ಗೆ ಅವಕಾಶ ಕೊಡಿ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರಾದ ಷಡಕ್ಷರಿರವರು, ಶಿವಲಿಂಗೇಗೌಡರು, ಹೆಚ್. ಸಿ. ಬಾಲಕೃಷ್ಣರವರು ಸಹಿ ಹಾಕಿದ್ದಾರೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಎರಡರಲ್ಲಿ ಒಂದು ತೀರ್ಮಾನವಾಗಬೇಕು. ಮಾನ–ಮರ್ಯಾದೆ ಪ್ರಶ್ನೆ ಇದು.

(ಗೊಂದಲ)

ಅಧ್ಯಕ್ಷರು: ಮಾನ್ಯ ಕೆ. ಷಡಕ್ಷರಿಯವರೆ, ತಾವೇ ಮಾತನಾಡಿ, ತಾವು ಮಾತನಾಡುತ್ತೇವೆಂದರೆ ಮಾತನಾಡಿ. ನಮ್ಮ ಕ್ಷೇತ್ರದಲ್ಲಿ ರೋಡ್ ಇಲ್ಲ, ಏನೂ ಇಲ್ಲ. ಕೇವಲ ಇವರ ಕ್ಷೇತ್ರದಲ್ಲಿ ಮಾತ್ರ ಇವೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಹಾಸನ–ದುದ್ದ–ತಿಪಟೂರು ರಸ್ತೆ ಬಹಳ ವಿಶೇಷವಾದ ರಸ್ತೆಯಾಗಿದೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಆ ರಸ್ತೆಯದ್ದು 7 ವರ್ಷದ ಸಮಸ್ಯೆಯಾಗಿದೆ. ಅವರು ಮಾನ್ಯ ಮುಖ್ಯಮಂತ್ರಿಗಳೊಡನೆ ಇದರ

ಬಗ್ಗೆ ಚರ್ಚೆ ಮಾಡಿಕೊಳ್ಳಲಿ. ಇಲಾಖೆ ಮೇಲೆ ಚರ್ಚೆ ಮಾಡಿ. ಬೇರೆ ಕಡೆ divertಆಗುವುದು ಬೇಡ. ಅವರೆಲ್ಲ ಒಪ್ಪಿಕೊಳ್ಳುತ್ತಾರೆ, ಏನೂ ತೊಂದರೆಯಿಲ್ಲ.

ಶ್ರೀ ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು): ಹಾಸನ–ದುದ್ದ–ತಿಪಟೂರು ರಸ್ತೆ ಬಗ್ಗೆ ಈಗಾಗಲೇ ಕಳೆದ ವಾರ ಒಂದು ಮೀಟಿಂಗ್ ಮಾಡಿ ಕೆಲಸ ಪ್ರಾರಂಭವಾಗಿದೆ. ಇದಕ್ಕೆ ಅವರೆಲ್ಲ ಸಹಕಾರ ಕೊಡಬೇಕು. 2011ರಲ್ಲಿ ಕೆಲಸ ಪ್ರಾರಂಭವಾಗಿ ಬೇರೆ ಬೇರೆ ಕಾರಣಗಳಿಲಗಾಗಿ ಅವರು withdraw ಮಾಡಿಕೊಂಡು ಅವರನ್ನು ವಜಾ ಮಾಡಬೇಕೆಂದಾಗ ಅವರು ಕೋರ್ಟಗೆ ಹೋಗಿ Stay ತೆಗೆದುಕೊಂಡು ಬಂದು ನಂತರ ಪುನಃ r-negotiate ಮಾಡಿ, ಬ್ಯಾಂಕ್ ಗ್ಯಾರೆಂಟಿ ಕೊಟ್ಟು, ನಮ್ಮ ಕಛೇರಿಯಲ್ಲಿ ಇವರ ಸಮ್ಮುಖದಲ್ಲೇ ಚರ್ಚೆ ಮಾಡಿದ್ದೇವೆ, ಈಗ ಕೆಲಸ ಪ್ರಾರಂಭವಾಗಿದೆ. ಅದಕ್ಕೆ ಏನೂ ಆತಂಕ ಪಡಬೇಕಾಗಿಲ್ಲ. ಈ ಕೆಲಸ 2011 ರಲ್ಲಿ ಪ್ರಾರಂಭವಾಗಿ ಇನ್ನೂ ಆಗಿಲ್ಲವೆಂದು ಅವರಿಗೆಲ್ಲಾ ಮುಜುಗರ ಇದೆ. ನಾನು ಅದನ್ನು ಮನಗಂಡು ನಾನೇ ಸ್ವತಃ ಆ ರಸ್ತೆಗೆ ಹೋಗಿ ಅಲ್ಲಿ ಕೆಲಸ ಪ್ರಾರಂಭ ಮಾಡಿ, ಪುನಃ ನಿಂತುಹೋಗಿ ಇವರನ್ನೆಲ್ಲ ಕರೆದು ಸಭೆ ಮಾಡಿ ಕೆಲಸವನ್ನು ಮಾಡಲು ಒಪ್ಪಿಕೊಂಡು ತುಮಕೂರು ಮತ್ತು ಹಾಸನದ ಜಿಲ್ಲಾಧಿಕಾರಿಗಳನ್ನು ಕರೆಸಿ ಜಿಲ್ಲೆಯ ಸಮಸ್ಯೆಯನ್ನು ಬಗೆಹರಿಸಿ ಮಾಡುವುದಕ್ಕೆ ಸೂಚನೆಯನ್ನು ಕೊಟ್ಟಿದ್ದೇವೆ. ಅವರೇನೂ ಆತಂಕಪಡಬೇಕಾಗಿಲ್ಲ. ಈಗಾಗಲೇ ಕೆಲಸ ಪ್ರಾರಂಭವಾಗಿದೆ, ಜನರು ದೂರು ನೀಡಿದ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಂಡಿದೆ. ಈ ವಿಷಯವನ್ನು 69 ರಲ್ಲಿ ಚರ್ಚೆ ಮಾಡಬೇಕೆಂದು ಸ್ವತಃ. ಅವರು ಭಾಗವಹಿಸಿ ತೀರ್ಮಾನ ಮಾಡಿರುವುದು.

(ಗೊಂದಲ)

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಕೆಲಸ ಪುನಃ ನಿಂತುಹೋಗಿದೆ.

ಶ್ರೀ ಕೆ. ಷಡಕ್ಷರಿ: ಮಾನ್ಯ ರೇವಣ್ಣನವರೆ, ನಾನು, ನಾಳೆ ಒಂದು ಸಭೆಯನ್ನು ಕರೆದಿದ್ದೇನೆ. ಆ ಸಭೆಯಲ್ಲಿ ತೀರ್ಮಾನ ಮಾಡಿ material ಕೊಡಿಸುವಂತೆ ಮಾಡಿ ಅಲ್ಲಿ ಕೆಲಸ ಪ್ರಾರಂಭ ಮಾಡುವ ಹಾಗೆ ಮಾಡುತ್ತೇವೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ನಿಮ್ಮಿಂದ 2 ತಿಂಗಳು ಕೆಲಸ ನಿಂತು ಹೋಯಿತು.

ಶ್ರೀ ಕೆ. ಷಡಕ್ಷರಿ: ನಮ್ಮಿಂದ ಕೆಲಸ ನಿಂತಿಲ್ಲ. ನೀವು ಇಷ್ಟು ವರ್ಷಗಳಿಂದ ಮಾಡದೇ ಇರುವ ರಸ್ತೆಯನ್ನು ನಮ್ಮ ಸರ್ಕಾರ ಮಾಡಿಸುವ ಹಾಗೆ ಮಾಡಿದೆ. ಮೂರು ವರ್ಷದಿಂದ ರಸ್ತೆ ಮಾಡಿಸಿಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಇದೇನು ಹಾಸನ ಜಿಲ್ಲಾ ಪಂಚಾಯಿತಿ ಆಯಿತಲ್ಲ. ಇದೇನು ಹಾಸನ ಜಿಲ್ಲಾಪಂಚಾಯಿತಿಯೇ? ಇದು ವಿಧಾನಸೌಧ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಇವರು ಚರ್ಚೆ ಮಾಡಬೇಕೆಂದಿರುವ ವಿಷಯಕ್ಕೆ ಈಗಾಗಲೇ ಲೋಕೋಪಯೋಗಿ ಇಲಾಖೆಯವರು ನಿಮ್ಮ ಜೊತೆ ಚರ್ಚೆ ಮಾಡಿದ್ದಾರೆ. ಇದು ಮಾನ್ಯ ಶಿವಲಿಂಗೇಗೌಡರಿಗೆ ಬಹಳ ಚೆನ್ನಾಗಿ ಗೊತ್ತಿದೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಮಂತ್ರಿಗಳೇ, ಜೆಲ್ಲಿ ಕೊಡುವುದಕ್ಕೆ ಆಗುವುದಿಲ್ಲವೆಂದು ಮತ್ತೆ ತಿಪಟೂರಿನಲ್ಲಿ ಕೆಲಸವನ್ನು ನಿಲ್ಲಿಸಿದ್ದಾರೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಶಿವಲಿಂಗೇಗೌಡ, ತಾವೇ Contractor.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಮುಖ್ಯಮಂತ್ರಿಗಳೇ, ನಾನು Contractor ಆಲ್ಲ. ಈಗ ಅದನ್ನು ಬಿಟ್ಟುಬಿಟ್ಟಿದ್ದೇನೆ.

ಶ್ರೀ ಸಿದ್ಧರಾಮಯ್ಯ: ಹಿಂದೆ Contractor ಆಗಿದ್ದಿರಿ, ಆದರೆ ಈಗ ಇಲ್ಲ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಹೌದು. ಹಿಂದೆ Contractor ಆಗಿದ್ದೆ, ಪಂಚಾಯಿತಿ ಮೇಂಬರ್ ಆದಮೇಲೆ Contractor ಲೈಸೆನ್ಸ್ ರದ್ದುಮಾಡಿ ಈಗ MLA ಆಗಿದ್ದೇನೆ.

ಶ್ರೀ ಸಿದ್ಧರಾಮಯ್ಯ: ಈಗ ಬೇರೆಯವರು ಮಾಡುತ್ತಾರೆ. ನೀವು ಮಾಡುವುದಿಲ್ಲ ಅಷ್ಟೇ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಗ್ರಾಮ ಪಂಚಾಯಿತಿ ಮೆಂಬರ್ ಆದ ಮೇಲೆ 15 ವರ್ಷಗಳಿಂದ Contractor ಕೆಲಸವನ್ನು ಬಿಟ್ಟಿದ್ದೇನೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಶಿವಲಿಂಗೇಗೌಡ ಸಹಕಾರ ಬಹಳ ಮುಖ್ಯ.

(ಗೊಂದಲ)

ಶ್ರೀ ಹೆಚ್. ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಕೆಲಸ ಪ್ರಾರಂಭ ವಾಗಿದೆ. ಗುಬ್ಬಿ ಕಡೆಯವರು ನಮ್ಮ ಕಡೆಯಿಂದ ಮಾಡಿ ಎಂದು ಅವರು ತಡೆ ಹಾಕಿದ್ದರು. ಅಲ್ಲಿಯ ಶಾಸಕರು, ಜಿಲ್ಲಾಧಿಕಾರಿಗಳು ಹಾಗೂ ತುಮಕೂರು, ಹಾಸನ ಜಿಲ್ಲಾಧಿಕಾರಿಗಳು 3 ಜನ ಮಾನ್ಯ ಸದಸ್ಯರನ್ನು ಕರೆಸಿ, ಒಂದು ವಾರದ ಹಿಂದೆ ನನ್ನ ಕಚೇರಿಯಲ್ಲಿ ಸಭೆ ಮಾಡಿ ಆ ಸಭೆಯಲ್ಲಿ ಮಾಡುತ್ತೇವೆಂದು ಒಪ್ಪಿಕೊಂಡು ಎರಡೂ ಕಡೆಯಿಂದ ಮಾಡುವುದಕ್ಕೆ ಹೇಳಿದ್ದೇವೆ. ದಯವಿಟ್ಟು ಅವರೆಲ್ಲ ಸಹಕಾರ ಕೊಡಲಿ.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಸಚಿವರು, ಮಾನ್ಯ ಮುಖ್ಯಮಂತ್ರಿಗಳು ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಅವರು ಪ್ರಾರಂಭ ಮಾಡುತ್ತಾರೆ. ಅಧ್ಯಕ್ಷರೆ, ತಾವು ಮುಂದು ವರೆಸಿ.

ಶ್ರೀ ಹೆಚ್. ಟಿ. ಸೋಮಶೇಖರ್: ಮಾನ್ಯ ಲೋಕೋಪಯೋಗಿ ಸಚಿವರೆ, ಬೆಂಗಳೂರು ಸುತ್ತಮುತ್ತ ಯಾವುದೇ ರಸ್ತೆಗಳನ್ನು ಮಾಡಿಸಬೇಡಿ.

ಇಲ್ಲಿ ಯಾರು ದರ್ಬಾರು ಮಾಡುತ್ತಾರೆ? ಅವರಿಗೆ ಮಾತ್ರ ಆದೇಶ ಮಾಡಿಸಿ. ನಮ್ಮ ರಸ್ತೆಗಳೆಲ್ಲಾ ಹಾಳಾಗಿವೆ. ನಮ್ಮ ಕಡೆ ಟೆಂಡರ್ ಆಗಿ ಬಹಳ ದಿವಸಗಳಾಗಿವೆ. ಎಲ್ಲಾ ರಸ್ತೆಗಳು ಹಾಳಾಗಿವೆ.

6. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಇಂಧನ ಇಲಾಖೆಯ ಬೇಡಿಕೆಯ ಮೇಲೆ ಮುಂದುವರಿದ ಚರ್ಚೆ:

ಶ್ರೀ ಬಸವರಾಜ್ ಬೊಮ್ಮಾಯಿ (ಶಿಗ್ಗಾಂವಿ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಇಲಾಖೆಯ ಬಗ್ಗೆ ನಿನ್ನೆ ದಿವಸ ಸ್ಥೂಲವಾಗಿ ಮಾತನಾಡಿದ್ದೇನೆ. ಎಸ್ಕಾಂಗಳ ಬೇಡಿಕೆ 9,600 ಮಿಲಿಯನ್ ಯೂನಿಟ್‌ಗಳಿದ್ದರೆ, ಸರಬರಾಜು ಆಗಿರುವುದು 7.750. ಅಂದರೆ, ಸುಮಾರು 16.67% ಗ್ಯಾಪ್ ಇದೆ. 6498 ಉತ್ಪಾದನೆ ಆಗಿದೆ. ಅಂದರೆ, ಸುಮಾರು 1052 ಮಿಲಿಯನ್ ಮೆಗಾವ್ಯಾಟ್ ವಿದ್ಯುತ್ ಅನ್ನು ತಾವು ಹೊರಗಡೆಯಿಂದ ಖರೀದಿ ಮಾಡಿದ್ದೀರಿ. ಅದಕ್ಕೆ 3092 ಕೋಟಿ ರೂ. ಗಳು ಖರ್ಚಾಗಿದೆ. ಇದನ್ನು ತಪ್ಪಿಸಿ ನಮ್ಮಲ್ಲೇ generation ಮಾಡಿದರೆ ಶಾಶ್ವತವಾದಂಥ ಒಂದು ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಿನ್ನ ನಾನು ಪ್ರಸ್ತಾಪ ಮಾಡಿದ್ದೆ. ನಮ್ಮ ಕಾಲದಲ್ಲಿ ಪ್ರಾರಂಭವಾದ ಯರಮರಸ್, BTPS-3 ಮತ್ತು ಯಡ್ಲಾಪುರ, ಇವುಗಳಲ್ಲಿ ಉತ್ಪಾದನೆಯನ್ನು ಆದಷ್ಟು ಬೇಗನೆ ಮಾಡಿದರೆ ಸುಮಾರು 2200 ಮೆಗಾವ್ಯಾಟ್ ಉತ್ಪಾದನೆ ಆಗುವುದಕ್ಕೆ ಸಾಧ್ಯತೆ ಇದೆ. ಅದರಲ್ಲಿ ಯಡ್ಲಾಪುರದ ಕೇಂದ್ರಕ್ಕೆ ಸಂಬಂಧಪಟ್ಟ ಹಾಗೆ environmental clearancee ಏನಿದೆ ಅದನ್ನು ಆದಷ್ಟು ಬೇಗನೆ ತರುವುದಕ್ಕೆ ತಾವು ಪ್ರಯತ್ನವನ್ನು ಮಾಡಬೇಕು. RTPS ಗೆ ಒಂದು ವಿಶೇಷವಾದ Action plan ಮಾಡಬೇಕು. ಕೆಲವೊಂದು ಯೂನಿಟ್ ಗಳನ್ನು ಬದಲಾವಣೆಗಳನ್ನು ಮಾಡಬೇಕಾಗಿದೆ. ಕೆಲವು maintenance ಸರಿಯಾಗಿ ಮಾಡಬೇಕಾಗಿದೆ. ಪದೇ ಪದೇ ವಿದ್ಯುತ್ ನಿಲ್ಲುವುದನ್ನು ತಪ್ಪಿಸಬೇಕೆಂಬ ಮಾತನ್ನು ಹೇಳಿದ್ದೇನೆ. Transmission ಗೆ 1,400 ಕೋಟಿ ರೂ. ಗಳನ್ನು ಒದಗಿಸಿದ್ದರೆ, ಕೇವಲ 653 ಕೋಟಿ ರೂ.ಗಳಷ್ಟು ಮಾತ್ರ